ಕರ್ನಾಟಕ ಸರ್ಕಾರ

ಕಾಲೇಜು ಶಿಕ್ಷಣ ಇಲಾಖೆ

ಸಂಖ್ಯೆ: DCE/BUD/GEN/22/2022/BUD

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ,
ಬೆಂಗಳೂರು ದಿನಾಂಕ: 16.12.2022

# ಸುತ್ತೋಲೆ

ವಿಷಯ: ಇಲಾಖಾ ವ್ಯಾಪ್ತಿಯ ಸರ್ಕಾರಿ ಹಾಗೂ ಖಾಸಗಿ ಅನುದಾನಿತ ಕಾಲೇಜುಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ / ನಿವೃತ್ತಿ ಹೊಂದಿರುವ ಬೋಧಕರು / ತತ್ಸಮಾನ ವೃಂದದವರಿಗೆ 2006ರ ಮತ್ತು 2016ರ ಪರಿಷ್ಕೃತ ಯುಜಿಸಿ ವೇತನ ಶ್ರೇಣಿಯಂತೆ ಬಾಕಿ ಪಾವತಿಸುವಾಗ ಹೆಚ್ಚುವರಿಯಾಗಿ ಮೊತ್ತವನ್ನು ಹಿಂಪಡೆಯುವ ಬಗ್ಗೆ,

ಉಲ್ಲೇಖ : 1. ಸರ್ಕಾರದ ಪತ್ರದ ಸಂಖ್ಯೆ ಇಡಿ 306 ಯು ಎನ್ ಇ 2021 ದಿನಾಂಕ 24.02.2022, ಪರಿಷ್ಕೃತ ಪತ್ರದ ದಿನಾಂಕ 25.02.2022, ದಿನಾಂಕ 05.03.2022 ಮತ್ತು 09.03.2022

*****

ಪ್ರಸ್ತಾಪಿತ ವಿಷಯಕ್ಕೆ ಸಂಬಂಧಿಸಿದಂತೆ ಇಲಾಖಾ ವ್ಯಾಪ್ತಿಯ ಸರ್ಕಾರಿ ಹಾಗೂ ಖಾಸಗಿ ಅನುದಾನಿತ ಪದವಿ ಕಾಲೇಜುಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ / ನಿವೃತ್ತಿ ಹೊಂದಿದ್ದ ಬೋಧಕರು / ತತ್ಸಮಾನ ವೃಂದದವರಿಗೆ ದಿನಾಂಕ 01.01.2006 ರಿಂದ ಪೂರ್ವಾನ್ವಯವಾಗುವಂತೆ 2006ರ ಆರನೇ ಪರಿಷ್ಕೃತ ಯುಜಿಸಿ ವೇತನ ಶ್ರೇಣಿಯನ್ನು ಜಾರಿಗೊಳಿಸಿ ಅದರಂತೆ ದಿನಾಂಕ 01.01.2006 ರಿಂದ 23.12.2009ರ ಅವಧಿಯ ವೇತನ ವ್ಯತ್ಯಾಸದ ಬಾಕಿ ಪಾವತಿಸಲು ಹಲವು ಕಂತುಗಳಲ್ಲಿ ಅನುದಾನ ಬಿಡುಗಡೆ ಮಾಡಲಾಗಿರುತ್ತದೆ.

ಕಾಲೇಜು ಶಿಕ್ಷಣ ಇಲಾಖೆ ವ್ಯಾಪ್ತಿಯಲ್ಲಿ ಬರುವ ಸರ್ಕಾರಿ ಮತ್ತು ಖಾಸಗಿ ಅನುದಾನಿತ ಪದವಿ ಹಾಗೂ ಬಿ.ಎಡ್ ಬೋಧಕರು ತತ್ಸಮಾನ ವೃಂದದವರಿಗೆ 2016ರ 7ನೇ ಪರಿಷ್ಕೃತ ಯುಜಿಸಿ ವೇತನ ಶ್ರೇಣಿಯನ್ನು ದಿನಾಂಕ 01.01.2016 ರಿಂದ ಪೂರ್ವಾನ್ವಯವಾಗುವಂತೆ ಜಾರಿಗೊಳಿಸಲಾಗಿದರುತ್ತದೆ ಹಾಗೂ ದಿನಾಂಕ 01.01.2016 ರಿಂದ 31.03.2019ರ ಅವಧಿಯ ವೇತನ ವ್ಯತ್ಯಾಸದ ಬಾಕಿ ಪಾವತಿಸಲು ಈಗಾಗಲೇ ಅನುದಾನ ಬಿಡುಗಡೆ ಮಾಡಲಾಗಿದೆ.

2006ರ 6ನೇ ಪರಿಷ್ಕೃತ ಯುಜಿಸಿ ಮತ್ತು 2016ರ 7ನೇ ಪರಿಷ್ಕೃತ ಯುಜಸಿ ವೇತನ ಶ್ರೇಣಿಗಳನ್ವಯ ವೇತನ ವ್ಯತ್ಯಾಸದ ಬಾಕಿ ಲೆಕ್ಕಾಚಾರಕ್ಕೆ ಸಂಬಂಧಿಸಿದಂತೆ, ಸರ್ಕಾರದಿಂದ ಸ್ವೀಕೃತವಾಗಿರುವ ಪತ್ರಗಳಲ್ಲಿ ಹಿಂಬಾಕಿಯನ್ನು ಈ ಕೆಳಕಂಡ ಮಾದರಿಯಲ್ಲಿ ಲೆಕ್ಕಾಚಾರ ಮಾಡಲು ನಿರ್ದೇಶಿಸಲಾಗಿದೆ.

ವೇತನ ಬಾಕಿ = ( 2016 ರ ಪರಿಷ್ಕೃತ ವೇತನ ಶ್ರೇಣಿಯ ಮೂಲ ವೇತನ)-(2006ರ ಪರಿಷ್ಕೃತ ವೇತನ ಶ್ರೇಣಿಯ ಮೂಲವೇತನ + ತುಟ್ಟಿಭತ್ಯೆ)

ಮೇಲಿನಂತೆ, 2006 ರ 6ನೇ ಯುಜಿಸಿ ಹಿಂಬಾಕಿ ಮತ್ತು 2016ರ 7ನೇ ಯುಜಿಸಿ ಹಿಂಬಾಕಿಯನ್ನು ಲೆಕ್ಕಾಚಾರ ಮಾಡಲು ಹಾಗೂ ಈಗಾಗಲೇ ತುಟ್ಟಿಭತ್ಯೆ ಮತ್ತು ಇತರೆ ಭತ್ಯೆಗಳೊಂದಿಗೆ ಹೆಚ್ಚುವರಿಯಾಗಿ ಪಾವತಿಸಿರುವ ಮೊತ್ತವನ್ನು ವಸೂಲಿಮಾಡಿ, ಸರ್ಕಾರಕ್ಕೆ ಜಮೆ ಮಾಡುವಂತೆ ಸೂಚಿಸಲಾಗಿದೆ

---2

ಸರ್ಕಾರದ ನಿರ್ದೇಶನದಂತೆ ಕ್ರಮವಹಿಸಲು ಈ ಕಛೇರಿಯ ಸಮ ಸಂಖ್ಯೆಯ ಪತ್ರದ ದಿನಾಂಕ 17.05.2022ರ ಸುತ್ತೋಲೆಯಲ್ಲಿ 2006ರ 6ನೇ ಯುಜಿಸಿ ವೇತನ ಹಿಂಬಾಕಿ ಮತ್ತು 2016ರ 7ನೇ ಪರಿಷ್ಕೃತ ಯುಜಿಸಿ ಹಿಂಬಾಕಿ ಪಾವತಿಸುವಾಗ ತುಟ್ಟಿಭತ್ಯೆ ಮತ್ತು ಇತರೆ ಭತ್ಯೆಗಳೊಂದಿಗೆ ಈಗಾಗಲೇ ಹೆಚ್ಚುವರಿಯಾಗಿ ಪಾವತಿಸಿರುವ ಮೊತ್ತವನ್ನು ಹಿಂಪಡೆದು ಸರ್ಕಾರಕ್ಕೆ ಜಮೆ ಮಾಡಬೇಕಾಗಿದ್ದು ಅದರಂತೆ ಲೆಕ್ಕಾಚಾರ ಮಾಡಿ ವಿವರಗಳನ್ನು ಅನುಬಂಧ -01 ರಿಂದ 04ರಲ್ಲಿ ಸಲ್ಲಿಸುವಂತೆ ಸೂಚಿಸಲಾಗಿತ್ತು.

ಇಲಾಖಾ ವ್ಯಾಪ್ತಿಯ ಜಂಟಿ ನಿರ್ದೇಶಕರುಗಳು ಮತ್ತು ಸರ್ಕಾರಿ ಪ್ರಥಮದರ್ಜೆ ಕಾಲೇಜುಗಳ ಪ್ರಾಂಶುಪಾಲರುಗಳಿಂದ ಅನುಬಂಧ -01 ರಿಂದ 04ರಲ್ಲಿ ಸ್ವೀಕೃತವಾಗಿರುವ ಮಾಹಿತಿಯನ್ನು ಪರಿಶೀಲಿಸಿದ್ದು ಈ ಕೆಳಕಂಡ ನ್ಯೂನತೆಗಳನ್ನು ಗಮನಿಸಲಾಗಿದೆ.

1. ದಿನಾಂಕ 01.01.2006 ರ ನಂತರ ನೇಮಕಾತಿ ಹೊಂದಿದ ಅಥವಾ ದಿ 01.01.2006 ರ ನಂತರ ಯುಜಿಸಿ ವೇತನ ವಿಸ್ತರಿಸಲ್ಪಟ್ಟ ಬೋಧಕರುಗಳು 2006 6ನೇ ಪರಿಷ್ಕೃತ ವೇತನಶ್ರೇಣಿಯಂತೆ ದಿನಾಂಕ 01.01.2006 ರಿಂದ 23.12.2009ರ ಅವಧಿಯ ವೇತನ ವ್ಯತ್ಯಾಸದ ಬಾಕಿ ಪಾವತಿಸಲು ಅರ್ಹರಿರುವುದಿಲ್ಲ. 2006ರ ನಂತರ ನೇಮಕಾತಿ ಹೊಂದಿದವರಿಗೂ ಹಿಂಬಾಕಿ ಲೆಕ್ಕಾಚಾರ ಮಾಡಿ ಸಲ್ಲಿಸಲಾಗಿದೆ.
2. ದಿನಾಂಕ 01.01.2006 ರಿಂದ 23.12.2009 ರ ಅವಧಿಯಲ್ಲಿ ಹಾಗೂ ದಿನಾಂಕ 01.01.2016 ರಿಂದ 31.03.2019ರ ಅವಧಿಯಲ್ಲಿ ಉನ್ನತ ಎಜಿಪಿ ಮಂಜೂರಾಗಿದ್ದಲ್ಲಿ ಆರ್ಥಿಕ ಸೌಲಭ್ಯವನ್ನು ಆದೇಶ ಹೊರಡಿಸಿದ ದಿನಾಂಕದಿಂದ ಪಾವತಿಸಬೇಕಾಗಿರುತ್ತದೆ. ಆದರಂತೆ ಲೆಕ್ಕಾಚಾರ ಮಾಡದೆ, ದಿನಾಂಕ 01.01.2006 ರಿಂದ 23.12.2009 ರ ಅವಧಿಯಲ್ಲಿ ಹಾಗೂ ದಿನಾಂಕ 01.01.2016 ರಿಂದ 31.03.2019 ಅವಧಿಗಳಲ್ಲೇ ಆರ್ಥಿಕ ಸೌಲಭ್ಯಗಳನ್ನು ಪರಿಗಣಿಸಿ ಲೆಕ್ಕಾಚಾರ ಮಾಡಿರುವುದು ಕಂಡುಬಂದಿರುತ್ತದೆ.
3. ಮಾಹಿತಿ ಸಲ್ಲಿಸುವ ಸಮಯದಲ್ಲಿ, ಕರ್ತವ್ಯ ನಿರ್ವಹಿಸುತ್ತಿರುವ ಕಾಲೇಜಿನಿಂದಲೇ (ಲೀನ್ ಕಾಲೇಜು ) ಮಾಹಿತಿ ಸಲ್ಲಿಸಬೇಕಾಗಿರುತ್ತದೆ. ಹಾಗೂ ನಿವೃತ್ತಿ ಹೊಂದಿದ್ದರೆ ನಿವೃತ್ತಿ ಹೊಂದಿದ ಕಾಲೇಜಿನಿಂದ ಮಾಹಿತಿ ಒದಗಿಸಬೇಕಾಗಿರುತ್ತದೆ.
4. ಹಲವು ಕಾಲೇಜುಗಳಲ್ಲಿ ನಿವೃತ್ತಿ ಹೊಂದಿರುವ ಬೋಧಕರುಗಳ ವಿವರಗಳನ್ನು ಅನುಬಂಧ-01 ರಿಂದ 04ರಲ್ಲಿ ಸಲ್ಲಿಸಿರುವುದಿಲ್ಲ. ಒಬ್ಬ ಬೋಧಕರ ವಿವರಗಳನ್ನು ಹಲವು ಕಾಲೇಜುಗಳಿಂದ ಸಲ್ಲಿಸಲಾಗಿದೆ. ಕೆ.ಜಿ.ಐ.ಡಿ ಸಂಖ್ಯೆ ಮತ್ತು ಇತರೆ ಅಗತ್ಯ ಮಾಹಿತಿಯನ್ನು ಸಲ್ಲಿಸದೇ ಅಪೂರ್ಣ ಮಾಹಿತಿಯನ್ನು ಸಲ್ಲಿಸಲಾಗಿದೆ.
5. ಈಗಾಗಲೇ ಪಡೆದಿರುವ ಹಿಂಬಾಕಿಯ ಒಟ್ಟು ಮೊತ್ತವನ್ನು ನಮೂದಿಸದೇ ನಿವ್ವಳ ಮೊತ್ತವನ್ನು ನಮೂದಿಸಿ ಸಲ್ಲಿಸಲಾಗಿದೆ. ಸಂಬಂಧಪಟ್ಟ ಬೋಧಕರುಗಳು, ಪರಿಶೀಲಿಸಿದವರು ಮತ್ತು ಪ್ರಾಂಶುಪಾಲರ ಸಹಿಹಾಕದೇ ಸಲ್ಲಿಸಿರುವುದು ಸಹಾ ಕಂಡು ಬಂದಿರುತ್ತದೆ.

ಇಲಾಖಾ ವ್ಯಾಪ್ತಿಯ ಎಲ್ಲಾ ಜಂಟಿ ನಿರ್ದೇಶಕರುಗಳು / ಸರ್ಕಾರಿ ಪ್ರಥಮದರ್ಜೆ ಕಾಲೇಜುಗಳ ಪ್ರಾಂಶುಪಾಲರುಗಳಿಂದ ಸ್ವೀಕೃತವಾಗಿರುವ ಮಾಹಿತಿಯನ್ನು ಕ್ರೂಢೀಕರಿಸಿ ಇಲಾಖಾ ಜಾಲತಾಣದಲ್ಲಿ ಪ್ರಕಟಿಸಲಾಗಿದೆ ( Provisional Data of Excess Arrears Recovery ) ಸದರಿ ಪಟ್ಟಿಯಲ್ಲಿ ಯಾವುದೇ ನೌಕರರ ಮಾಹಿತಿ ಬಿಟ್ಟು ಹೋಗಿದ್ದಲ್ಲಿ ಅಥವಾ ಕಾಲೇಜಿನ ದಾಖಲಾತಿಗಳೊಂದಿಗೆ ತಾಳೆಯಾಗದೇ ಇದ್ದಲ್ಲಿ ಪರಿಷ್ಕೃತ ಮಾಹಿತಿಯನ್ನು ದೃಢೀಕರಿಸಿ ಪೂರಕ ದಾಖಲಾತಿಗಳೊಂದಿಗೆ ಈ ಪತ್ರಕ್ಕೆ ಲಗತ್ತಿಸಿರುವ ಅನುಬಂಧದಲ್ಲಿ ದಿನಾಂಕ 23.12.2022ರ ಒಳಗಾಗಿ ಸಲ್ಲಿಸಲು ಸೂಚಿಸಲಾಗಿದೆ (soft copy in excel format should be sent through email : budgetdce2223@gmail.com). ಇಲಾಖೆಯ / ಸರ್ಕಾರದ ಸೂಚನೆಗಳನ್ನು ಪಾಲಿಸದೇ ಹೆಚ್ಚುವರಿಯಾಗಿ ಬಾಕಿ ಮೊತ್ತವನ್ನು ಪಾವತಿಸಿ ಸರ್ಕಾರಕ್ಕೆ ನಷ್ಟ ಉಂಟಾಗಲು ಕಾರಣರಾದವರ ವಿರುದ್ಧ ನಿಯಮಾನುಸಾರ ಶಿಸ್ತುಕ್ರಮ ಕೈಗೊಳ್ಳಲಾಗುವುದು ಎಂದು ಈ ಮೂಲಕ ಕಟ್ಟುನಿಟ್ಟಾಗಿ ಸೂಚಿಸಲಾಗಿದೆ.

(ಟಿಪ್ಪಣಿ ಮಾನ್ಯ ಆಯುಕ್ತರಿಂದ ಅನುಮೋದಿಸಲ್ಪಟ್ಟಿದೆ).

ಕಾಲೇಜು ಶಿಕ್ಷಣ ನಿರ್ದೇಶಕರು

ಇವರಿಗೆ:

ಇಲಾಖಾ ವ್ಯಾಪ್ತಿಯ ಎಲ್ಲಾ ಜಂಟಿ ನಿರ್ದೇಶಕರುಗಳು ಹಾಗೂ ಎಲ್ಲಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರುಗಳು

ಪ್ರತಿಗಳು:- 1). ಪ್ರೋಗ್ರಾಮರ್ / ಅಧೀಕ್ಷಕರು, ಮಾಹಿತಿ ತಂತ್ರಜ್ಞಾನ ವಿಭಾಗ. ಕಾ.ಶಿ.ಇ. ಕೇಂದ್ರ ಕಛೇರಿ, ಬೆಂಗಳೂರು. - ಇಲಾಖಾ ಜಾಲತಾಣದಲ್ಲಿ ಪ್ರಕಟಿಸಲು.